ಬಂದೀಖಾನೆಯಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿದ ೧ನೇ ದರ್ಜೆ ಅಧೀಕ್ಷಕರ ಸಂಖ್ಯೆ.

೧೨೯೮. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಪರಿಶಿಷ್ಟ ಜಾತಿಗೆ ಸೇರಿದ ೧ನೇ ದರ್ಜೆ ಅಧೀಕ್ಷಕರು ಬಂದೀಖಾನೆ ಇಲಾಖೆಯಲ್ಲಿ ಎಷ್ಟು ಜನ ಇದ್ದಾರೆ ? ಅವರ ಹೆಸರುಗಳ ವಿವರ ನೀಡುವುದು ?

ಆ) ಪರಿಶಿಷ್ಟ ಜಾತಿಗೆ ಸೇರಿದ ೧ನೇ ದರ್ಜೆ ಅಧೀಕ್ಷಕರನ್ನು ಜಿಲ್ಲಾ ಬಂದೀಖಾನೆ ಅಧಿಕಾರಿಯಾಗಿ ಇದುವರೆವಿಗೂ ವರ್ಗಾಯಿಸಿಲ್ಲದಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು)

ಅ) ಒಬ್ಬ ಅಧೀಕ್ಷಕರಿದ್ದಾರೆ. ಶ್ರೀ ಬಿ. ಎಸ್. ಸಂಗಾವಿ

ಆ) ಜಿಲ್ಲಾ ಬಂದೀಖಾನೆಗಳ ಅಧೀಕ್ಷಕರ ಹುದ್ದೆಗಳು ಗ್ರೂಪ್ 'ಬಿ' ಹುದ್ದೆಗಳಾಗಿದ್ದರಿಂದ ಗ್ರೂಪ್ 'ಎ' ಅಧಿಕಾರಿಗಳನ್ನು ಜಿಲ್ಲಾ ಬಂದೀಖಾನೆಗಳಿಗೆ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬಸವ ಕಲ್ಯಾಣ ಕಂದಾಯ ವಿಭಾಗ ಕಛೇರಿಗೆ ಜೀಪನ್ನು ಒದಗಿಸುವುದು

೧೩೦೨. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬಸವಕಲ್ಯಾಣ ಕಂದಾಯ ವಿಭಾಗವನ್ನಾಗಿ ಮಾಡಿ ಎಷ್ಟು ವರ್ಷಗಳಾದವು

ಆ) ಹಾಗಿದ್ದಲ್ಲಿ ಈವರೆಗೆ ಇಲ್ಲಿನ ಕಛೇರಿಯಲ್ಲಿ ಜೀಪ್ ಇಲ್ಲದೆ ಸಾರ್ವಜನಿಕ ಕೆಲಸಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕೂಡಲೇ ಈ ಕಛೇರಿಗೆ ಜೀಪ್ ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು)

ಅ) ಬಸವಕಲ್ಯಾಣ ಉಪ ವಿಭಾಗವನ್ನು ಸ್ಥಾಪಿಸಿ ೬ ವರ್ಷಗಳಾದವು ದಿನಾಂಕ ೧೫-೮-೧೯೮೪

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ಕಛೇರಿಗೆ ಜೀಪ್ ಕೊಳ್ಳಲು ಸರ್ಕಾರವು ೧೯೮೬ನೇ ಇಸವಿಯಲ್ಲಿಯೇ ಅನುಮತಿ ನೀಡಿದೆ. ಆದರೆ ಸಾಕಷ್ಟು ಅನುದಾನವಿಲ್ಲದೆ ಜೀಪನ್ನು ಖರೀದಿಸಿಲ್ಲವೆಂದು ತಿಳಿದು ಬಂದಿದೆ. ಈ ಬಗ್ಗೆ ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ಪಟ್ಟಣಗೆರೆ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾತೆ ಮಾಡಿದ ಪ್ರಕರಣಗಳಲ್ಲಿ ನಿಯಮಗಳ ಉಲ್ಲಂಘನೆ

೧೨೮೯. ಶ್ರೀ ರಾಮಲಿಂಗರೆಡ್ಡಿ (ಜಯನಗರ) ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ (ಪಂತರಪಾಳ್ಯ) ಪಟ್ಟಣಗೆರೆ ಪಂಚಾಯಿತಿಯ ವ್ಯಾಪ್ತಿಗೆ ಬರುವ ಜಮೀನುಗಳಲ್ಲಿ ಒಟ್ಟು ಎಷ್ಟು ಖಾತೆಗಳನ್ನು ದಿನಾಂಕ ೧-೧-೧೯೮೦ ರಿಂದ (೧೬-೬-೧೯೮೭) ಈ ದಿನಾಂಕದವರೆಗೆ ಮಾಡಲಾಗಿದೆ.

ಆ) ಯಾರ್ಯಾರಿಗೆ ಯಾವ ಯಾವ ಜಮೀನಿನ ಸಂಬಂಧದಲ್ಲಿ ಖಾತೆಗಳನ್ನು ಮಾಡಲಾಗಿದೆ (ಹೆಸರು ವಿಳಾಸ ಮುಂತಾದವುಗಳನ್ನು ನೀಡುವುದು)

ಇ) ಈ ಪ್ರಕರಣಗಳಲ್ಲಿ ಕಾನೂನಿನ ಉಲ್ಲಂಘನೆಯೇನಾದರೂ ನಡೆದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಈ ಅವಧಿಯಲ್ಲಿ ಪಟ್ಟಣಗೆರೆ ಪಂಚಾಯಿತಿಯಲ್ಲಿರುವ ಪಂತರಪಾಳ್ಯ ಗ್ರಾಮದ ಯಾವುದೇ ಕಂದಾಯ ಭೂಮಿಗೆ ಖಾತೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.